# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
# Karnataka State Road Transport Corporation

ಸಂಖ್ಯೆ: ಕರಾಸಾ/ಕೇಕ/ಆಡಳಿತ/ಎ1-11/ 189 /2020-21 ದಿನಾಂಕ: 14.07.2020

**ಆ ದೇ ಶ**

**ವಿಷಯ:** ಕೊರೋನಾ ವೈರಸ್ (ಕೋವಿಡ್-19) ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಲಾಕ್‌ಡೌನ್ ಘೋಷಿಸಿರುವ ಕುರಿತು.

**ಉಲ್ಲೇಖ:** 1.ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 157 ಟಿ.ಎನ್.ಆರ್ 2020 ದಿನಾಂಕ: 13.07.2020
2.ಸೂಕ್ತಾಧಿಕಾರಿಗಳ ಆದೇಶ ದಿನಾಂಕ: 14.07.2020

*****

ಸರ್ಕಾರಿ ಆದೇಶ ಸಂಖ್ಯೆ: ಕಂಇ 157 ಟಿ.ಎನ್.ಆರ್.2020 ದಿನಾಂಕ: 13.07.2020ರಲ್ಲಿ ಕೋವಿಡ್-19 ಸೋಂಕಿನ ಹರಡುವಿಕೆಯನ್ನು ನಿಯಂತ್ರಿಸಲು ಹಾಗೂ ಹತೋಟಿಗೆ ತರಲು ಮತ್ತಷ್ಟು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಬಿ.ಬಿ.ಎಂ.ಪಿ ಪ್ರದೇಶ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಒಳಗೊಂಡಿರುವ ಬೆಂಗಳೂರು ಪ್ರದೇಶಗಳಲ್ಲಿ ದಿನಾಂಕ:14.07.2020ರ ರಾತ್ರಿ 8.00 ಗಂಟೆಯಿಂದ ದಿನಾಂಕ:22.07.2020 ಬೆಳಗ್ಗೆ 5.00 ಗಂಟೆಯವರೆಗೆ 07 ದಿನಗಳ ಅವಧಿಯವರೆಗೆ ಲಾಕ್‌ಡೌನ್ ಅನ್ನು ಆದೇಶಿಸಿ, ರಾಜ್ಯ ಸರ್ಕಾರದ ಕಚೇರಿಗಳು ಮತ್ತು ಅವುಗಳ ಸ್ವಾಯತ್ತ ಸಂಸ್ಥೆಗಳು ನಿಗಮ, ಮುಂತಾದವುಗಳು ಮುಚ್ಚಿರತಕ್ಕದ್ದು ಎಂದು ಮಾರ್ಗಸೂಚಿ ಹೊರಡಿಸಿರುತ್ತದೆ. ಅದರಂತೆ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿದೆ.

1) ದಿನಾಂಕ: 14.07.2020 ರ ಸಂಜೆ 08:00 ಗಂಟೆಯಿಂದ ದಿನಾಂಕ: 22.07.2020 ರಂದು ಬೆಳಗ್ಗೆ 5.00 ಗಂಟೆಯವರೆಗೆ ಕರಾರಸಾ ನಿಗಮದ ಕೇಂದ್ರ ಕಚೇರಿ, ಬೆಂಗಳೂರು ಕೇಂದ್ರೀಯ ವಿಭಾಗದ ವಿಭಾಗೀಯ ಕಚೇರಿ ಮತ್ತು ಘಟಕಗಳು (ನೆಲಮಂಗಲ ಘಟಕ ಹೊರತುಪಡಿಸಿ), ಬೆಂಗಳೂರು ಪ್ರಾದೇಶಿಕ ಕಾರ್ಯಾಗಾರ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಕರಾಸಾ ಮುದ್ರಣಾಲಯ ಮುಚ್ಚಲ್ಪಡುತ್ತವೆ.
2) ಕಚೇರಿ ಕೆಲಸಗಳನ್ನು ಸಾಧ್ಯವಾದಷ್ಟು ಅಧಿಕಾರಿ/ಸಿಬ್ಬಂದಿಗಳು ಮನೆಯಿಂದಲೇ ನಿರ್ವಹಿಸುವಂತೆ ಇಲಾಖಾ/ವಿಭಾಗ ಮುಖ್ಯಸ್ಥರು ಕ್ರಮವಹಿಸುವುದು.
3) ಕೋವಿಡ್-19 ಗೆ ಸಂಬಂಧಿಸಿದ ಕಾರ್ಯಗಳಿಗೆ ನಿಯೋಜಿಸಿರುವ/ನಿಯೋಜಿಸಲಾಗುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಮಗೆ ವಹಿಸುವ ಕೆಲಸಗಳನ್ನು ನಿರ್ವಹಿಸುವುದು.
4) ತುರ್ತು ಸಂದರ್ಭಗಳಲ್ಲಿ ವಾಹನ ಕಾರ್ಯಾಚರಣೆ ಮಾಡುವ ಕುರಿತು ಸಂಚಾರ ಇಲಾಖೆಯಿಂದ ಪ್ರತ್ಯೇಕ ನಿರ್ದೇಶನಗಳನ್ನು ನೀಡಲಾಗುವುದು.

ಮುಂದುವರೆದು, ಇತರೆ ಜಿಲ್ಲೆಗಳಲ್ಲಿ ಸರ್ಕಾರ/ಜಿಲ್ಲಾಡಳಿತ ಲಾಕ್‌ಡೌನ್ ಘೋಷಿಸಿದಲ್ಲಿ, ಅಂತಹ ನಿರ್ದೇಶನಗಳನ್ನು ಸಂಬಂಧಪಟ್ಟ ವಿಭಾಗ ಮಟ್ಟದಲ್ಲಿಯೇ ತಪ್ಪದೆ ಪಾಲಿಸಲು ವಿಭಾಗ ಮುಖ್ಯಸ್ಥರು ತಮ್ಮ ಹಂತದಲ್ಲಿಯೇ ಸೂಕ್ತ ಕ್ರಮಕೈಗೊಳ್ಳುವುದು.

ಸಂಬಂಧಪಟ್ಟವರೆಲ್ಲರೂ ಮೇಲಿನ ನಿರ್ದೇಶನಗಳನ್ನು ತಪ್ಪದೇ ಪಾಲಿಸಲು ಸೂಚಿಸಲಾಗಿದೆ.

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ)

..02

Scanned with CamScanner

<u>ಪ್ರತಿ ಮಾಹಿತಿಗಾಗಿ:</u>

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ನಿರ್ದೇಶಕರು(ಭ:ಜಾ), ಕರಾರಸಾ ನಿಗಮ, ರವರಿಗೆ.

<u>ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ವಿಭಾಗೀಯ ಮುಖ್ಯಸ್ಥರುಗಳು/ಕಾರ್ಯ ವ್ಯವಸ್ಥಾಪಕರು/ಪ್ರಾಂಶುಪಾಲರು ಕರಾರಸಾ ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ.
6. ಭದ್ರತಾ ಮತ್ತು ಜಾಗ್ರತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರಿಗೆ, ಕಚೇರಿ ಆದೇಶವನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ) ರವರಿಗೆ ವರದಿ ಸಲ್ಲಿಸುವುದು.
7. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರಿಗೆ, ಕಚೇರಿ ಆದೇಶವನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರಿಗೆ
9. ಪ್ರಧಾನ ಕಛೇರಿ ಪತ್ರ ಕಡತ.

Scanned with CamScanner